# ಸೈಪ್ರಸ್ ದ್ವೀಪದ ಡೇಂಜರಸ್ ಮೀನು

ಮೆಡಿಟರೇನಿಯನ್ ಸಮುದ್ರದ ಸೈಪ್ರಸ್ (Cyprus) ದ್ವೀಪ, ಸಾಗರಪ್ರಿಯ ಪ್ರವಾಸಿಗಳ ಪಾಲಿಗೆ ಸ್ವರ್ಗತಾಣ. ನೀಲಾಕಾಶಕ್ಕೆ ಕನ್ನಡಿಯಿಟ್ಟಂತಿರುವ ಸಮುದ್ರ, ಅದರೊಳಗಿನ ಬಗೆಬಗೆಯ ಜೀವವೈವಿಧ್ಯವನ್ನು ಕಣ್ತುಂಬಿಕೊಳ್ಳಲು ಅಸಂಖ್ಯ ಪ್ರವಾಸಿಗರು ಅಲ್ಲಿಗೆ ಭೇಟಿ ನೀಡುತ್ತಿರುತ್ತಾರೆ. ಇತ್ತೀಚೆಗೆ ಹೀಗೆ ಸೈಪ್ರಸ್ ದ್ವೀಪಕ್ಕೆ ಹೋದ ಪ್ರವಾಸಿಗರು ಸಮುದ್ರ ನೀರಿನಲ್ಲಿ ಆಟವಾಡುವುದಿರಲಿ, ಕಾಲು ಇಳಿಬಿಡಲೂ ಅಂಜುತ್ತಿದ್ದಾರೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಪ್ರವಾಸಿಗರ ಪಾಲಿಗೆ ಸಮುದ್ರವೆಂಬುದು ಹುಳಿದ್ರಾಕ್ಷಿಯಾಗುವಂತೆ ಮಾಡಿರುವುದು ಲಯನ್ ಫಿಶ್‌ಗಳು!

ಸಮುದ್ರದಲ್ಲಿ ಲಯನ್ ಫಿಶ್‌ಗಳ ಸಂಖ್ಯೆ ವಿಪರೀತವಾಗಿದ್ದು ಜನರು ಕಡಲಿಗಿಳಿಯಲು ಅಂಜುತ್ತಿದ್ದಾರೆ. ಲಯನ್ ಫಿಶ್ ಎಂಬ ಭಯಾನಕ ಮೀನಿನ ರೆಕ್ಕೆಗಳಲ್ಲಿ ವಿಷಪದಾರ್ಥವಿರುವುದೇ ಭಯಕ್ಕೆ ಕಾರಣ.

ಈ ದ್ವೀಪವನ್ನು 'ರಿಪಬ್ಲಿಕ್ ಆಫ್ ಸೈರಸ್' ಎಂದು ಕರೆಯಲ್ಪಡುತ್ತದೆ. ಟರ್ಕಿಯ ದಕ್ಷಿಣ ಭಾಗ, ಗ್ರೀಸ್ ದೇಶದ ಆಗ್ನೇಯ ಮತ್ತು ಈಜಿಪ್ಟ್‌ನ ಉತ್ತರಕ್ಕಿರುವ ಈ ದ್ವೀಪ ಮೆಡಿಟರೇನಿಯನ್‌ನಲ್ಲಿ ಅತೀ ಹೆಚ್ಚು ಜನಸಂಖ್ಯೆ ಇರುವ ದ್ವೀಪವಾಗಿದೆ. ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯೂ ಜಾಸ್ತಿಯಿದೆ. ಲಯನ್ ಫಿಶ್‌ಗಳ ಸಂಖ್ಯೆ ದಿಢೀರ್ ಹೆಚ್ಚಾಗಿದ್ದರಿಂದ ಅಲ್ಲಿನ ಪ್ರವಾಸೋದ್ಯಮಕ್ಕೂ ಸಂಕಟ ಎದುರಾಗಿದೆ.

ವರ್ಷಗಳ ಹಿಂದೆ ಲಯನ್ ಫಿಶ್‌ಗಳ ವರ್ಣರಂಜಿತ ರೆಕ್ಕೆಗಳನ್ನು ಕ್ಯಾಮೆರಾ ಕಣ್ಣುಗಳಲ್ಲಿ ಸೆರೆ ಹಿಡಿಯಲು ಪ್ರವಾಸಿಗರು ಬರುತ್ತಿದ್ದರು. ಆದರೆ ಕಳೆದ ಐದು ವರ್ಷಗಳಲ್ಲಿ ಈ ಮೀನುಗಳ ಸಂಖ್ಯೆ ವಿಪರೀತವಾಗಿರುವುದರಿಂದ ಮೀನುಗಳ ನಿಯಂತ್ರಣಕ್ಕೆ ಇಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ.

## ಮೀನುಗಳು ಹೆಚ್ಚಲು ಕಾರಣವೇನು?

ಮೈ ತುಂಬಾ ರೆಕ್ಕೆಗಳಿರುವ ಲಯನ್ ಫಿಶ್ ನಾಲ್ಕು ದಿನಕ್ಕೆ ಸರಿಸುಮಾರು 30 ಸಾವಿರ ಮೊಟ್ಟೆಗಳನ್ನಿಡುತ್ತದೆ. 'ರಾಷ್ಟ್ರೀಯ ಸಾಗರ ಮತ್ತು ವಾತಾವರಣ ಆಡಳಿತ' (ಎನ್‌ಒಎಎ) ಹೇಳುವ ಪ್ರಕಾರ ಈ ಮೀನು ಪ್ರತಿ ವರ್ಷ ಸರಿಸುಮಾರು 2 ದಶಲಕ್ಷ ಮೊಟ್ಟೆಯನ್ನಿಡುತ್ತದೆ.

ದಕ್ಷಿಣ ಪೆಸಿಫಿಕ್ ಮತ್ತು ಹಿಂದೂ ಮಹಾಸಾಗರದಲ್ಲಿ ಕಂಡುಬರುವ ಈ ಮೀನುಗಳಲ್ಲಿ 12 ವಿಧಗಳಿವೆ. ಕಲ್ಲುಬಂಡೆಗಳ ನಡುವೆ ಹೊಂಚು ಹಾಕಿ ಕುಳಿತುಕೊಳ್ಳುವ ಇವು ಆಹಾರವನ್ನು ಗಬಕ್ಕನೆ ನುಂಗಿ ಬಿಡುತ್ತವೆ. ಅವುಗಳ ಹೊಟ್ಟೆ ಆಹಾರ ಸೇವಿಸಿದಾಗ ಸಹಜ ಗಾತ್ರಕ್ಕಿಂತ 30 ಪಟ್ಟು ದೊಡ್ಡದಾಗಿ ಬಿಡುತ್ತದೆ!

ಹೊಟ್ಟೆಬಾಕ ಮೀನು ಹುಟ್ಟುವಾಗ 2.5 ಸೆಂ.ಮೀ. ಇದ್ದು, 33ರಿಂದ 38 ಸೆಂ.ಮೀ.ವರೆಗೆ ಬೆಳೆಯುತ್ತದೆ. ನ್ಯಾಷನಲ್ ಜಿಯೊಗ್ರಾಫಿಕ್ ಪ್ರಕಾರ ಇವುಗಳ ಆಯಸ್ಸು 15 ವರ್ಷ. ಸೂಜಿಯಂತಹ ರಕ್ಷಣಾ ಮುಳ್ಳುಗಳನ್ನು ಹೊಂದಿರುವ ಲಯನ್ ಫಿಶ್‌ಗಳು ಅಪಾಯದ ಸೂಚನೆ ಬಂದಾಗ ಅವುಗಳನ್ನು ಬಳಸುತ್ತವೆ. ಆ ಮುಳ್ಳುಗಳು ಇನ್ನೊಂದು ದೇಹಕ್ಕೆ ಚುಚ್ಚಿದಾಗ ಮೀನಿನ ವಿಷಗ್ರಂಥಿ ಮತ್ತು ಬೆನ್ನೆಲುಬಿನಿಂದ ವಿಷ ಹೊರ ಸೂಸಲ್ಪಡುತ್ತದೆ.

## ಮನುಷ್ಯನಿಗೆ ಚುಚ್ಚಿದರೆ?

ಒಂದು ವೇಳೆ ಲಯನ್ ಫಿಶ್ ಮುಳ್ಳುಗಳು ಮನುಷ್ಯವಿಗೆ ಚುಚ್ಚಿದರೆ ವಿಪರೀತ ನೋವು ಮತ್ತು ಬೆವರುವಿಕೆ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಇವುಗಳ ಚುಚ್ಚುವಿಕೆಯಿಂದ ಉಸಿರಾಟಕ್ಕೆ ತೊಂದರೆಯುಂಟಾಗಬಹುದು, ಪಾರ್ಶ್ವವಾಯುವೂ ಸಂಭವಿಸಬಹುದು. ಮನುಷ್ಯನ ದೇಹಕ್ಕೆ ಮುಳ್ಳು ಚುಚ್ಚಿ ಎಷ್ಟು ವಿಷ ದೇಹದೊಳಗೆ ಹೋಗಿದೆ ಎಂಬುದಕ್ಕನುಗುಣವಾಗಿ ಪರಿಣಾಮ ಇರುತ್ತದೆ. ಮುಳ್ಳು ಚುಚ್ಚಿದರೆ 2–3 ದಿನಗಳಿಂದ ಹಿಡಿದು ಒಂದು ವಾರದವರೆಗೆ ನೋವು ಇರುತ್ತದೆ.

■ ರಶ್ಮಿ ಕೆ.

